# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ


ಆಯುಕ್ತರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ,
ಕೇಂದ್ರೀಕೃತ ದಾಖಲಾತಿ ಘಟಕ,
ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ,
ಕೆಂಪೇಗೌಡ ರಸ್ತೆ, ಬೆಂಗಳೂರು-560002.
ದೂರವಾಣಿ-22228805, 22483140, 22483145
ಫ್ಯಾಕ್ಸ್-22271866
email : cackarnataka@gmail.com


ಸಂಖ್ಯೆ:ಸಿಎಸಿ-3/ಬಿ.ಇಡಿ.ದಾಖಲಾತಿ/2014-15 ದಿನಾಂಕ: 20-09-2014

## ಪ್ರಕಟಣೆ

ವಿಷಯ:- 2014-15 ನೇ ಸಾಲಿನ ಬಿ.ಇಡಿ. ಕೋರ್ಸ್‌ಗೆ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಮತ್ತು ಹಂಚಿಕೆ.

ಉಲ್ಲೇಖ: 1.ಸರ್ಕಾರಿ ಆದೇಶ ಸಂಖ್ಯೆ. ಇಡಿ 10 ಯುಬಿಸಿ 99, ಬೆಂಗಳೂರು, ದಿನಾಂಕ 3.6.1999

2.ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1252)

3.ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1253)

4.ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1255)

5.ಸರ್ಕಾರಿ ಆದೇಶ ಸಂ. ಇಡಿ 212 ಯುಎನ್‌ಇ 2013, ಬೆಂಗಳೂರು, ದಿನಾಂಕ 12-11-2013.

-0-

2014-15 ನೇ ಶೈಕ್ಷಣಿಕ ಸಾಲಿಗೆ ಬಿ.ಇಡಿ. ಕೋರ್ಸಿನ ವ್ಯಾಸಂಗಕ್ಕಾಗಿ ರಾಜ್ಯದ ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಉಲ್ಲೇಖ(1)ರಂತೆ ಕರೆಯಲಾಗಿದೆ. ಅಭ್ಯರ್ಥಿಗಳು ವೆಬ್‌ಸೈಟ್ www.schooleducation.kar.nic.in ನಲ್ಲಿ "**ON LINE APPLICATION FOR ADMISSION TO B.Ed. COURSE FOR THE YEAR 2014-15**" ಎಂಬುದನ್ನು ಕ್ಲಿಕ್ ಮಾಡಿದಾಗ ಭಿತ್ತರಿಸಲಾಗುವ **"WEB HOME PAGE"** ನಲ್ಲಿ **"NEW REGISTRATION "** ನ್ನು ಕ್ಲಿಕ್ ಮಾಡಿ, ಮಾಹಿತಿ ತುಂಬಿ **LOGIN** ಮಾಡಿ, ನಂತರ **MY APPLICATION** ತೆರೆದುಕೊಳ್ಳುವುದು. ಅದರಲ್ಲಿ ಭಿತ್ತರಿಸಲಾಗಿರುವ ಅರ್ಜಿ ನಮೂನೆಯಲ್ಲಿಯೇ ವಿವರಗಳನ್ನು ಭರ್ತಿ ಮಾಡಬೇಕು. ಈ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮುನ್ನ ಮೇಲ್ಕಂಡ ವೆಬ್‌ಸೈಟ್‌ನಲ್ಲಿರುವ **"Instructions"**

ಶೀರ್ಷಿಕೆಯಡಿಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಓದಿಕೊಂಡು ಜಾಗರೂಕತೆಯಿಂದ ಅರ್ಜಿಯನ್ನು ಭರ್ತಿ ಮಾಡಬೇಕು. **ಅಭ್ಯರ್ಥಿಗಳು "ON LINE " ಮೂಲಕ ಅರ್ಜಿಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಭರ್ತಿ ಮಾಡತಕ್ಕದ್ದು. ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಭರ್ತಿ ಮಾಡುವುದು. "ON LINE " ಮೂಲಕ ಅರ್ಜಿ ಸಲ್ಲಿಸಬೇಕೇ ಹೊರತು ಬೇರೆ ಯಾವುದೇ ರೀತಿಯಲ್ಲಿ ಅರ್ಜಿ ಸಲ್ಲಿಸುವುದನ್ನು ನಿಷೇಧಿಸಲಾಗಿದೆ.**

**ಅರ್ಜಿಗಳು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (ಡಯಟ್) ಹಾಗೂ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ (ಸಿ.ಟಿ.ಇ.) ಲಭ್ಯವಿರುವುದಿಲ್ಲ.**

**"ON LINE " ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 18–10–2014ರ ರಾತ್ರಿ 12.00 ಘಂಟೆಯವರೆವಿಗೆ.**

**"ON LINE " ಅರ್ಜಿಗಳನ್ನು ಭರ್ತಿ ಮಾಡುವಾಗ ಅಪೂರ್ಣ ಮಾಹಿತಿ, ತಪ್ಪು ಮಾಹಿತಿ, ದ್ವಂದ್ವ ಮಾಹಿತಿಗಳನ್ನು ನೀಡುವುದರಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಕ್ಕೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ. ಇಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.**

**ಅರ್ಜಿ ಶುಲ್ಕ :**

| ಕ್ರಮ ಸಂಖ್ಯೆ | ವರ್ಗ | ಅರ್ಜಿ ಶುಲ್ಕ | ಸೇವಾ ಶುಲ್ಕ | ಬ್ಯಾಂಕ ಶುಲ್ಕ | ಒಟ್ಟು ಶುಲ್ಕ |
|---|---|---|---|---|---|
| 1 | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ, ಪ್ರವರ್ಗ–1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ | ರೂ. 0–00 | ರೂ. 50–00 | ರೂ. 10–00 | **ರೂ. 60–00** |
| 2 | ಇತರೆ ಅಭ್ಯರ್ಥಿಗಳು | ರೂ. 150–00 | ರೂ. 50–00 | ರೂ. 10–00 | **ರೂ.210–00** |

ಬಿ.ಇಡಿ. ಕೋರ್ಸಿಗೆ ದಾಖಲಾಗುವ ಸರ್ಕಾರಿ ಕೋಟಾದ ಅಭ್ಯರ್ಥಿಗಳಿಗೆ ಅನ್ವಯಿಸುವ ಅರ್ಹತೆಗಳನ್ನೊಳಗೊಂಡಂತೆ ಎಲ್ಲಾ ನಿಯಮಗಳು ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಮಂಡಳಿ ಕೋಟಾದಡಿ ದಾಖಲಾಗುವ ಎಲ್ಲಾ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ.

**ಷರತ್ತುಗಳು:**

2014–15ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿ ಪ್ರಕ್ರಿಯೆ ಹಾಗೂ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಪಟ್ಟಿಯಲ್ಲಿ ಈ ಕೆಳಗಿನ ಷರತ್ತುಗಳನ್ವಯ ಬದಲಾವಣೆಗಳಿಗೆ ಒಳಪಡುತ್ತವೆ.

1. ನ್ಯಾಯಾಲಯದ ತೀರ್ಪು ಮತ್ತು ಆದೇಶಗಳು.
2. ಎನ್.ಸಿ.ಟಿ.ಇ. ಮಾರ್ಗಸೂಚಿ
3. ಉನ್ನತ ಶಿಕ್ಷಣ ಸಚಿವಾಲಯದ ಸುತ್ತೋಲೆ ಹಾಗೂ ಆದೇಶಗಳು.
4. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳ ನಿರ್ಣಯಗಳು ಮತ್ತು ಆದೇಶಗಳು
5. ಇತರ ಯಾವುದೇ ಸಂವಿಧಾನಾತ್ಮಕ ಬದ್ಧ ಆದೇಶಗಳು

**ಅರ್ಹತೆಗಳು:**

1. ಸರ್ಕಾರಿ ಸೀಟುಗಳಿಗೆ ಅಭ್ಯರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಅಭ್ಯರ್ಥಿಯಾಗಿರಬೇಕು.

"**ಕರ್ನಾಟಕದ ಅಭ್ಯರ್ಥಿ ಎಂದರೆ**"

(ಅ) ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಅಥವಾ 12ನೇ ತರಗತಿ ಅಥವಾ ಅರ್ಹತಾ ಪರೀಕ್ಷೆಯವರೆಗೆ ಕನಿಷ್ಟ 7 ವರ್ಷಗಳ ವ್ಯಾಸಂಗವನ್ನು ಕರ್ನಾಟಕದಲ್ಲಿ ಮಾಡಿರಬೇಕು. **ಹಾಗೂ**

(ಆ) ಎಸ್.ಎಸ್.ಎಲ್.ಸಿ./ 10ನೇ ತರಗತಿ **ಅಥವಾ** ದ್ವಿತೀಯ ಪಿ.ಯು.ಸಿ./12ನೇ ತರಗತಿ ಪರೀಕ್ಷೆಯನ್ನು ಕರ್ನಾಟಕದಲ್ಲಿಯೇ ಉತ್ತೀರ್ಣರಾಗಿರಬೇಕು.

(ಇ) ಎಸ್.ಎಸ್.ಎಲ್.ಸಿ. **ಅಥವಾ** ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ. ಆದರೆ ಈ ಅಭ್ಯರ್ಥಿಗಳು ಕರ್ನಾಟಕದಲ್ಲಿ ಕನಿಷ್ಟ 7 ವರ್ಷಗಳು ವಾಸ ಮಾಡಿದ ಬಗ್ಗೆ **ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರವನ್ನು ದಾಖಲಾತಿ ಸಮಯದಲ್ಲಿ ಸಲ್ಲಿಸಬೇಕು.**

ಎಸ್.ಎಸ್.ಎಲ್.ಸಿ. **ಅಥವಾ** ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ / ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ "ಖಾಸಗಿ ಅಭ್ಯರ್ಥಿ" ಎಂದು ನಮೂದಿಸಿರುವ ಅಂಕಪಟ್ಟಿಯನ್ನಾಗಲಿ ಅಥವಾ ದೃಢೀಕರಣ ಪತ್ರವನ್ನಾಗಲೀ ಸಲ್ಲಿಸಬೇಕು. (ಅಭ್ಯರ್ಥಿಯು ಒಂದು ತರಗತಿ ಅಥವಾ ವರ್ಗದಲ್ಲಿ ಉತ್ತೀರ್ಣರಾಗಲು ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಶೈಕ್ಷಣಿಕ ವರ್ಷಗಳ ವ್ಯಾಸಂಗವನ್ನು ಒಂದು ವರ್ಷ ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು).

**ವಿಶೇಷ ಸೂಚನೆ:**

ಹೈದ್ರಾಬಾದ್ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಆ ಪ್ರದೇಶದ ಅಭ್ಯರ್ಥಿಗಳನ್ನು ಕರ್ನಾಟಕ ಅಭ್ಯರ್ಥಿ ಎಂದು ತೀರ್ಮಾನಿಸಲಾಗುವುದು. (ಉಲ್ಲೇಖ(3)ರಂತೆ)

2. ಅಭ್ಯರ್ಥಿಯು ಯು.ಜಿ.ಸಿ. ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಮತ್ತು / ಅಥವಾ ಸ್ನಾತಕೋತ್ತರ ಪದವಿ ಅಥವಾ ಯಾವುದೇ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. ಹಾಗೂ ಪದವಿ ಮತ್ತು / ಅಥವಾ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯ ನಿಗದಿತ ಎಲ್ಲಾ ಪರೀಕ್ಷೆಗಳನ್ನು ವಿಶ್ವವಿದ್ಯಾಲಯ ಹಂತದ ಪರೀಕ್ಷೆಯಲ್ಲಿಯೇ ಉತ್ತೀರ್ಣರಾಗಿರಬೇಕು.

3. (ಎ) **ಯು.ಜಿ.ಸಿ. ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳು ನಡೆಸುವ ಪದವಿ ಮತ್ತು /ಅಥವಾ ಸ್ನಾತಕೋತ್ತರ ಪದವಿ ಅಥವಾ ಯಾವುದೇ ತತ್ಸಮಾನ ವಿದ್ಯಾರ್ಹತೆಯ ಎಲ್ಲಾ ವರ್ಷಗಳಲ್ಲಿ / ಸೆಮಿಸ್ಟರ್‌ಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳು ಆಂತರಿಕ ಅಂಕಗಳು ಸೇರಿ ಸರಾಸರಿ ಕನಿಷ್ಠ ಶೇ. 45 ಅಂಕಗಳನ್ನು ಮತ್ತು ಇತರ ಅಭ್ಯರ್ಥಿಗಳು ಆಂತರಿಕ ಅಂಕಗಳು ಸೇರಿ ಸರಾಸರಿ ಕನಿಷ್ಠ ಶೇ. 50 ಅಂಕಗಳನ್ನು ಗಳಿಸಿರಬೇಕು.**

**(ಬಿ)** ಒಟ್ಟು ಅಂಕಗಳ ಬದಲಿಗೆ ಗ್ರೇಡ್ **(Grade)** ಅನ್ನು ನೀಡಿರುವ ಅಭ್ಯರ್ಥಿಗಳ "**ಗ್ರೇಡ್**" ಈ ಮೇಲೆ ತಿಳಿಸಿರುವ ಶೇಕಡಾ ಅಂಕಗಳ ವ್ಯಾಪ್ತಿಯಲ್ಲಿರಬೇಕು.

**(ಸಿ)** ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಒಂದು ವಿಷಯವನ್ನು (ಉದಾ: Constitution of India, Computer Fundamentals ಇತ್ಯಾದಿ) ಪರೀಕ್ಷಾ ಪೂರಕ ವಿಷಯವನ್ನಾಗಿ **(Subsidiary Subjects)** ಅಧ್ಯಯನ ಮಾಡಬೇಕಾಗಿರುತ್ತದೆ. ಈ ವಿಷಯದ ಅಂಕಗಳನ್ನು ವಿಶ್ವವಿದ್ಯಾಲಯವು ಒಟ್ಟು ಅಂಕಗಳಿಗೆ ಪರಿಗಣಿಸಿದ್ದಲ್ಲಿ ಅದರಂತೆಯೇ ಅಂಕಗಳನ್ನು ನಮೂದಿಸುವುದು, ವಿಶ್ವವಿದ್ಯಾಲಯವು ಪೂರಕ ವಿಷಯಗಳ ಅಂಕಗಳನ್ನು
ಪರಿಗಣಿಸದೇ ಇದ್ದಲ್ಲಿ ಆ ಅಂಕಗಳನ್ನು ಹೊರತುಪಡಿಸಿ ಅರ್ಜಿಯನ್ನು ಭರ್ತಿ ಮಾಡುವುದು.

4. ಲ4.ಸರ್ಕಾರಿ / ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಸೇವಾ ಪ್ರಮಾಣ ಪತ್ರ ಮತ್ತು ಅಭ್ಯಾಸ ಮಾಡಲು ಸಕ್ಷಮ ಅಧಿಕಾರಿಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ಮತ್ತು ಸರ್ಕಾರದಿಂದ ಪಡೆದ ಅನುಮತಿ ಪತ್ರಗಳನ್ನು, ಅನುದಾನಿತ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ತಮ್ಮ ಉದ್ಯೋಗದಾತರಿಂದ ಪಡೆದ ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ದಾಖಲಾತಿ ಸಮಯದಲ್ಲಿ ಸಲ್ಲಿಸುವುದು. ಸೇವೆಯಲ್ಲಿರುವ ಶಿಕ್ಷಕರಿಗೆ ಯಾವುದೇ ಮೀಸಲಾತಿ / ವಿನಾಯತಿ ಇರುವುದಿಲ್ಲ. ಇತರೆ ಅಭ್ಯರ್ಥಿಗಳೊಂದಿಗೆ ಇವರನ್ನು ಪರಿಗಣಿಸಲಾಗುವುದು.
5. 2014-15ನೇ ಸಾಲಿನ ಬಿ.ಇಡಿ ದಾಖಲಾತಿ ಅಧಿಸೂಚನೆ ದಿನಾಂಕದ ಪೂರ್ವದಲ್ಲಿ ಪರೀಕ್ಷೆ ಬರೆದು ಉತ್ತೀರ್ಣರಾಗಿರುವವರು ಹಾಗೂ ಪರೀಕ್ಷೆ ಬರೆದು ಫಲಿತಾಂಶದ ನಿರೀಕ್ಷೆಯಲ್ಲಿ ಇರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

## ವಿಶೇಷ ಗುಂಪಿನ ಅರ್ಹತೆಯ ಬಗ್ಗೆ ವಿವರಣೆ:

(ಅ) ರಕ್ಷಣಾ ದಳದವರು :

**1)** ದಿನಾಂಕ 01-07-2011 ರಿಂದ 30-06-2012 ರವರೆಗೆ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆಗಳಲ್ಲಿ ಉತ್ತೀರ್ಣರಾಗಿರಬೇಕು.

ಅಥವಾ

**2)** ನೌಕರಿಗೆ ಸೇರುವಾಗ ತಮ್ಮ ಉದ್ಯೋಗದಾತರಿಗೆ ಘೋಷಣೆ ಮಾಡಿಕೊಂಡಿರುವ ಮೂಲಸ್ಥಾನ ಕರ್ನಾಟಕವಾಗಿದ್ದು, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ತಮ್ಮ ಮೂಲ ಸ್ಥಾನ ಕರ್ನಾಟಕ ಎಂಬುದರ ಬಗೆಗೆ ರಕ್ಷಣಾ ವಿಭಾಗದ ರೆಕಾರ್ಡ್‌ಗಳ ಕಛೇರಿಯಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು.

ಅಥವಾ

3) ಕರ್ನಾಟಕದಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ಮತ್ತು ಶಾಂತಿಭಂಗ ಸ್ಥಳಗಳಾದ ಜಮ್ಮು ಮತ್ತು ಕಾಶ್ಮೀರ ಅಥವಾ ಈಶಾನ್ಯ ಭಾಗಗಳಿಗೆ ಕರ್ತವ್ಯದ ಮೇಲೆ ಕಳುಹಿಸಲ್ಪಟ್ಟಿದ್ದು, ಅವರ ಕುಟುಂಬ ಕರ್ನಾಟಕದಲ್ಲಿ ವಾಸಿಸಲು ರಕ್ಷಣಾ ಪ್ರಾಧಿಕಾರದಿಂದ ಅನುಮತಿ ಪಡೆದ ರಕ್ಷಣಾದಳದವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು ಇಂತಹ ಅಭ್ಯರ್ಥಿಗಳು ಆಯ್ಕೆಗೆ ಬೇಕಾಗುವ ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಉತ್ತೀರ್ಣರಾಗಿರಬೇಕು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ “ ಃಡಿಕಾಚಿuಡಿಜಚಿ” ನ ಕೊನೆಯಲ್ಲಿ ನೀಡಿರುವ ನಿಗದಿತ ಅನುಬಂಧ'ಡ'ಲ್ಲಿ ತೋರಿಸಿರುವ ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಮೇಲು ಸಹಿ ಮಾಡಿಸಿರುವ ಸೈನಿಕ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

ಸೂಚನೆ:– ರಕ್ಷಣಾದಳದವರು ಹಾಗೂ ಮಾಜಿ ಸೈನಿಕ ಈ ಎರಡು ಗುಂಪುಗಳಲ್ಲಿ ಯಾವುದೇ ಒಂದು ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮತ್ತೊಂದು ಗುಂಪಿನ ಅರ್ಹ ಅಭ್ಯರ್ಥಿಗಳಿಂದ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲಾಗುವುದು.

(ಆ) ಮಾಜಿ ಸೈನಿಕರು: ಮಾಜಿ ಸೈನಿಕರೆಂದರೆ ಭಾರತೀಯ ರಕ್ಷಣಾದಳಗಳಾದ ಭೂ, ವಾಯು, ನೌಕಾ ದಳಗಳಲ್ಲಿ ಯಾವುದೇ ದರ್ಜೆಯಲ್ಲಿ ಯೋಧನಾಗಿ ಇಲ್ಲವೆ ಯೋಧನಲ್ಲದೆ ಸೇವೆ ಸಲ್ಲಿಸುತ್ತಿದ್ದು ಮತ್ತು ಸೇವೆಗೆ ಸೇರುವಾಗ ತನ್ನ ಮೂಲ ಸ್ವಗ್ರಾಮ ಕರ್ನಾಟಕದಲ್ಲಿರುವುದೆಂದು ಘೋಷಣೆ ಮಾಡಿರುವ ವ್ಯಕ್ತಿ ಮತ್ತು

1) ಇಂತಹ ಸೇವೆಯಿಂದ ನಿವೃತ್ತಿ ಹೊಂದಿ ನಿವೃತ್ತಿ ವೇತನ ಪಡೆಯುತ್ತಿರುವವರು

ಅಥವಾ

2) ವೈದ್ಯಕೀಯ ಕಾರಣದ ಮೇರೆಗೆ ಮಿಲಿಟರಿ ಸೇವೆಗೆ ಅನರ್ಹನೆಂದು ಅಥವಾ ತನ್ನ ಹತೋಟಿಗೆ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದವರು.

ಅಥವಾ

3) ಸ್ವಇಚ್ಛೆಯಿಂದಲ್ಲದೆ ಸಿಬ್ಬಂದಿ ಕಡಿತಗೊಳಿಸಿದ ಪರಿಣಾಮ ಸೇವೆಯಿಂದ ಬಿಡುಗಡೆಯಾದವರು

ಅಥವಾ

4) ಸ್ವಇಚ್ಛೆಯಿಂದ ಅಥವಾ ದುರ್ವರ್ತನೆ ಅಥವಾ ಅಸಾಮರ್ಥ್ಯ ಕಾರಣದಿಂದಾಗಿ ಕರ್ತವ್ಯದಿಂದ ತೆಗೆದುಹಾಕಿದ ಅಥವಾ ವಜಾ ಮಾಡಿದ ವ್ಯಕ್ತಿಯನ್ನು ಹೊರತುಪಡಿಸಿ ನಿರ್ದಿಷ್ಟ ಅವಧಿ ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಯಿಟಿ ಪಡೆದ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ಸಿಬ್ಬಂದಿ.

ಅ) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರ

ಆ) ಮಿಲಿಟರಿ ಸೇವೆ ಪರಿಣಾಮ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ಪಿಂಚಣಿದಾರ

ಇ) ಡಿಫೆನ್ಸ್ ಸೆಕ್ಯೂರಿಟಿ ಕಾರ್ಪ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇನೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಹೊರತುಪಡಿಸಿ ಶೌರ್ಯ ಪ್ರಶಸ್ತಿ (ಗ್ಯಾಲಂಟ್ರಿ ಅವಾರ್ಡ್ಸ್) ವಿಜೇತರು ಮೇಲಿನ ನಾಲ್ಕನೇ ಸಬ್ ಕ್ಲಾಸಿನಲ್ಲಿರುವವರನ್ನು ಹೊರತುಪಡಿಸಿ ದಿನಾಂಕ 1–7–87 ಕ್ಕೆ ಮುಂಚೆ ಗೌರವಾನ್ವಿತ ವಿಮುಕ್ತಿ ಹೊಂದಿದ ಹಾಗೂ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಮಾಜಿ ಯೋಧನೆಂದು ಪರಿಗಣಿಸಲಾಗುವುದು.

ಸೂಚನೆ:– 1. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳು ಅಥವಾ ರಾಜ್ಯ ಸರ್ಕಾರ ನಡೆಸುತ್ತಿರುವ

ವಿದ್ಯಾ ಸಂಸ್ಥೆಯಿಂದ ಅರ್ಹತಾ ಪರೀಕ್ಷೆಯನ್ನು ಇಂತಹ ಅಭ್ಯರ್ಥಿ ಪಾಸು ಮಾಡಿರಬೇಕು.

2. ಮಾಜಿ ಸೈನಿಕರು ಅಥವಾ ಅವರ ಪತಿ /ಪತ್ನಿ/ಮಗ/ಅವಿವಾಹಿತ ಮಗಳು ಈ ಸೌಲಭ್ಯಕ್ಕೆ ಅರ್ಹರು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಅಭ್ಯರ್ಥಿಯು ಈ "ಃಡಿಠಿಛಿಟಿಜಡಿ" ನ ಕೊನೆಯಲ್ಲಿ ನೀಡಿರುವ ನಿಗದಿತ ಅನುಬಂಧದ ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

(ಇ) ಗಡಿನಾಡು ಕನ್ನಡಿಗರು: ಗಡಿನಾಡು ಕನ್ನಡಿಗರು ಎಂದರೆ ವಿವಾದಗ್ರಸ್ತ ಕನ್ನಡ ಮಾತನಾಡುವ ಪ್ರದೇಶದಲ್ಲಿದ್ದು ಕನ್ನಡ/ಕೊಡವ/ತುಳು ಮಾತೃಭಾಷೆಯಾಗಿರುವ ಅಭ್ಯರ್ಥಿಗಳು, ವಿವಾದಗ್ರಸ್ತ ಪ್ರದೇಶಗಳಾದ ಮಹಾರಾಷ್ಟ್ರ ರಾಜ್ಯದ ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ, ಜತ್ ಮತ್ತು ಗಢಿಂಗ್ಲಾಜ್ ತಾಲ್ಲೂಕುಗಳು ಅಥವಾ ಕೇರಳ ರಾಜ್ಯದ ಕಾಸರಗೋಡ್ ತಾಲ್ಲೂಕುಗಳಲ್ಲಿ ವಾಸಿಸುವವರು. ಈ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

1. ಮಾತೃಭಾಷೆ ಕನ್ನಡ, ಕೊಡವ, ತುಳು ಆಗಿರುವ ಬಗೆಗೆ ವ್ಯಾಸಂಗ ಮಾಡಿದ ಸಂಸ್ಥೆಯ /ಶಾಲೆಯ ಮುಖ್ಯಸ್ಥ್‌ರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರ /ವರ್ಗಾವಣೆ ಪತ್ರ. ಈ ಪ್ರಮಾಣ ಪತ್ರವು ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.(ಅನುಬಂಧದಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)
2. ಅಭ್ಯರ್ಥಿಯು ವಿವಾದಗ್ರಸ್ಥ ಕನ್ನಡ ಮಾತನಾಡುವ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆಂಬುದರ ಬಗೆಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರ.

ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ಅಭ್ಯರ್ಥಿಗಳನ್ನು ಗಡಿನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಓಎಲ್ 2011 (ಭಾ–1), ಬೆಂಗಳೂರು ದಿನಾಂಕ 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

(ಈ) ಹೊರನಾಡು ಕನ್ನಡಿಗರು: ಹೊರನಾಡು ಕನ್ನಡಿಗರು ಎಂದರೆ, ಅಭ್ಯರ್ಥಿಯು ದಾಖಲಾತಿ ಬಯಸುವ ವರ್ಷದ ಜುಲೈ 1 ಕ್ಕೆ ಕನಿಷ್ಟ ಐದು ವರ್ಷಗಳಿಂದ ಕರ್ನಾಟಕ ರಾಜ್ಯದ ಹೊರಗೆ ಮತ್ತು ಭಾರತದ ಪ್ರಾಂತ್ಯದೊಳಗೆ ವಾಸಿಸುತ್ತಿರಬೇಕು ಮತ್ತು ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರಬೇಕು. ಆಯ್ಕೆಗೆ ಬೇಕಾಗುವ ವಿದ್ಯಾರ್ಹತೆ ಪರೀಕ್ಷೆಯನ್ನು ಅಭ್ಯರ್ಥಿಗಳು ಹೊರ ರಾಜ್ಯದ ವಿಶ್ವವಿದ್ಯಾಲಯ/ ಪರೀಕ್ಷಾ ಮಂಡಳಿ/ ಯಾವುದೇ ವಿದ್ಯಾಸಂಸ್ಥೆಯಿಂದ ಪಾಸು ಮಾಡಿರಬೇಕು. ಈ ಸೌಲಭ್ಯ ಪಡೆಯಲು ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಒದಗಿಸಬೇಕು.

1. ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರುವ ಬಗ್ಗೆ ವ್ಯಾಸಂಗ ಮಾಡಿದ ಸಂಸ್ಥೆಯ / ಶಾಲೆಯ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವು ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. (ಈ "Broucher" ನ ಕೊನೆಯಲ್ಲಿ ನಿಗದಿತ ಅನುಬಂಧದಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)
2. ದಿನಾಂಕ 01–07–2014ಕ್ಕೆ ಅಭ್ಯರ್ಥಿಯು ಕನಿಷ್ಟ ಐದು ವರ್ಷಗಳ ಕಾಲ ಎಂದರೆ ಜುಲೈ 2009 ರಿಂದ ಇಲ್ಲಿಯವರೆಗೆ ಹೊರ ರಾಜ್ಯದಲ್ಲಿ ಸತತವಾಗಿ ವಾಸಿಸಿದ ಬಗೆಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ.

ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ಅಭ್ಯರ್ಥಿಗಳನ್ನು ಹೊರನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಓಎಲ್ 2011 (ಭಾ–1), ಬೆಂಗಳೂರು ದಿನಾಂಕ 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

**(ಉ) ಎನ್.ಸಿ.ಸಿ. ಕೆಡೆಟ್ಸ್:**

**(i)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು **ಅಥವಾ**

**(ii)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಈ ಕೆಳಕಂಡ ಶಿಬಿರಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

ಅ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕರು)
ಆ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕಿಯರು)
(ಇ) ಅಖಿಲ ಭಾರತ ನೌಕಾ ಸೈನಿಕ್ ಶಿಬಿರ
(ಈ) ಅಖಿಲ ಭಾರತ ವಾಯು ಸೈನಿಕ್ ಶಿಬಿರ

ಮತ್ತು ಯೂತ್ ಎಕ್ಸ್‌ಚೇಂಜ್ ಪ್ರೋಗ್ರಾಮ್ಸ್ ಮತ್ತು ಫಾರಿನ್ ನಾವೆಲ್ ಕ್ರೂಸ್

**(iii)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಈ ಕೆಳಕಂಡ ಶಿಬಿರಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

ಅ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕರು)
ಆ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕಿಯರು)
(ಇ) ಅಖಿಲ ಭಾರತ ನೌಕಾ ಸೈನಿಕ್ ಶಿಬಿರ
(ಈ) ಅಖಿಲ ಭಾರತ ವಾಯು ಸೈನಿಕ್ ಶಿಬಿರ

ಮತ್ತು ಪರ್ವತಾರೋಹಣ ಸಾಹಸ ಯಾತ್ರೆ (5900 ಮೀಟರುಗಳಿಗಿಂತ ಹೆಚ್ಚು), ಗಾಳಿ ಶಕ್ತಿಯನ್ನು ಮಾತ್ರ ಉಪಯೋಗಿಸಿ ನೌಕಾಯಾನ ಸಾಹಸ ಯಾತ್ರೆ (401 ಕಿ.ಮೀ) ಮೋಟಾರ್ ಸೈಕಲ್ ಸಾಹಸ ಯಾತ್ರೆ (3500 ಕಿ.ಮೀ.ಗಳಿಗಿಂತ ಜಾಸ್ತಿ) ಮತ್ತು ಸೈಕಲಿಂಗ್ ಸಾಹಸ ಯಾತ್ರೆ (1500 ಕಿ.ಮೀ.ಗಳಿಗಿಂತ ಜಾಸ್ತಿ)ಯನ್ನು ಪೂರ್ಣಗೊಳಿಸಿರಬೇಕು.

**(iv)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಮತ್ತು ಡೆಪ್ಯೂಟಿ ಡೈರೆಕ್ಟರ್ ಜನರಲ್, ಎನ್.ಸಿ.ಸಿ. ನಿರ್ದೇಶನಾಲಯ, ಕರ್ನಾಟಕ ಮತ್ತು ಗೋವಾ ಇವರು ನಡೆಸುವ ಈ ಕೆಳಕಂಡ ಶಿಬಿರ/ ಕೋರ್ಸುಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಮತ್ತು ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ "ಬಿ" ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು

(ಅ) ರಾಷ್ಟ್ರೀಯ ಭಾವೈಕ್ಯತಾ ಶಿಬಿರ
(ಆ) ಚಾರಣ ಶಿಬಿರ
(ಇ) ಪರ್ವತಾರೋಹಣ ಕೋರ್ಸು
(ಈ) ಮೂಲ ನಾಯಕತ್ವ ಶಿಬಿರ
(ಉ) ಉನ್ನತ ನಾಯಕತ್ವ ಶಿಬಿರ
(ಊ) ರಾಕ್ ಕ್ಲೈಂಬಿಂಗ್ ಟ್ರೈನಿಂಗ್
(ಋ) ಭೂದಳ, ವಾಯುದಳ, ನೌಕಾದಳ ಮತ್ತು ಅವುಗಳ ವೈದ್ಯಕೀಯ ಸೇವೆಗಳು.

**(v)** ಕರ್ನಾಟಕ ರಾಜ್ಯದಲ್ಲಿ 8 ರಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಆದರೆ ಎನ್.ಸಿ.ಸಿ. ಕೋಟಾದಡಿಯಲ್ಲಿ ಮೀಸಲಾಗಿರುವ ಸೀಟುಗಳಿಗೆ ಅಭ್ಯರ್ಥಿಗಳನ್ನು ಈ ಕೆಳಗಿನ ಆದ್ಯತೆಯಲ್ಲಿ ಆಯ್ಕೆ ಮಾಡಲಾಗುವುದು.

ಮೊದಲನೆಯದಾಗಿ ಗಣರಾಜ್ಯೋತ್ಸವ ಶಿಬಿರದಲ್ಲಿ ಪಾಲ್ಗೊಂಡು ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಎರಡನೆಯದಾಗಿ ಅನುಚ್ಛೇದ 1 ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಭಾಗವಹಿಸಿ ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಮೂರನೆಯದಾಗಿ ಕರ್ನಾಟಕದಿಂದ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಪಾಲ್ಗೊಂಡು **ಎನ್.ಸಿ.ಸಿ. 'ಬಿ'** ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ನಾಲ್ಕನೆಯದಾಗಿ ಕರ್ನಾಟಕದಿಂದ ಅನುಚ್ಛೇದ (ii)ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು **ಎನ್.ಸಿ.ಸಿ. 'ಬಿ'** ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಐದನೆಯದಾಗಿ ಕರ್ನಾಟಕದಿಂದ ಅನುಚ್ಛೇದ (iii)ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಆರನೇಯದಾಗಿ ಅನುಚ್ಛೇದ (V)ರಲ್ಲಿನ ಅಭ್ಯರ್ಥಿಗಳನ್ನು ಪರಿಗಣಿಸುವ ಮೊದಲು ಅನುಚ್ಛೇದ (iV)ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

ಅನುಚ್ಛೇದ (V)ರಲ್ಲಿನ ಅಭ್ಯರ್ಥಿಗಳು ಅಂದರೆ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟನ್ನು ಮಾತ್ರ ಹೊಂದಿರುವ ಅಭ್ಯರ್ಥಿಗಳು ಉಳಿದ ಎನ್.ಸಿ.ಸಿ. ಸೀಟುಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮತ್ತು ಉಳಿದ ವರ್ಗಗಳ ಮೀಸಲಾತಿಯ ಅಭ್ಯರ್ಥಿಗಳೊಂದಿಗೆ ಮೆರಿಟ್ ಅನ್ವಯ ಸೀಟನ್ನು ಆಯ್ಕೆ ಮಾಡಿಕೊಳ್ಳಬಹುದು.

**(ಊ) ಎನ್.ಎಸ್.ಎಸ್. ಸ್ವಯಂ ಸೇವಕರು:** ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಕನಿಷ್ಟ ಎರಡು ವರ್ಷ ಸೇವೆ ಸಲ್ಲಿಸಿದ್ದು, ಕನಿಷ್ಟ ಎರಡು ಶಿಬಿರಗಳಲ್ಲಿ ಭಾಗವಹಿಸಿದ ಬಗೆಗೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಹೊಂದಿರುವವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

**(ಋ) ಕ್ರೀಡಾಪಟುಗಳು:** ತರಗತಿ 8 ರಿಂದ ಅಂತಿಮ ಪದವಿವರೆಗಿನ ವ್ಯಾಸಂಗದ ಎಂಟು ವರ್ಷಗಳ ಅವಧಿಯಲ್ಲಿ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆ ಅಥವಾ ಆಟೋಟಗಳು ಅಥವಾ ಪಂದ್ಯಾವಳಿಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಅಭ್ಯರ್ಥಿಗಳು.

ಕ್ರೀಡೆ / ಆಟೋಟಗಳು / ಪಂದ್ಯಾವಳಿಗಳನ್ನು ಆಯೋಜಿಸುವ ಪ್ರಾಧಿಕಾರಗಳು : 1. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ 2. ವಿಶ್ವವಿದ್ಯಾಲಯ 3. ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ. ಈ ಸಕ್ಷಮ ಪ್ರಾಧಿಕಾರಗಳು ನೀಡಿರುವ ಪ್ರಮಾಣ ಪತ್ರಗಳನ್ನು ಹಾಜರುಪಡಿಸುವ ಅಭ್ಯರ್ಥಿಗಳು ಕ್ರೀಡಾಪಟುಗಳ ಕೋಟಾದಲ್ಲಿ ಆಯ್ಕೆಯಾಗಲು ಅರ್ಹರು.

ದಾಖಲಾತಿ ಪ್ರಕ್ರಿಯೆಯಲ್ಲಿ ಅನಿವಾರ್ಯ ಬದಲಾವಣೆಗಳನ್ನು ಮಾಡಲು, ಸಲಹಾ ಸಮಿತಿಯ ಅನುಮೋದನೆ ಕಾಯ್ದಿರಿಸಿ, ವಿಶೇಷಾಧಿಕಾರಿಗಳು ಹಕ್ಕು ಹೊಂದಿರುತ್ತಾರೆ.

## ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ ಸೀಟುಗಳ ಮೀಸಲಾತಿ

ಲಭ್ಯವಿರುವ ಒಟ್ಟು ಸರ್ಕಾರಿ ಸೀಟುಗಳಲ್ಲಿ ಈ ಕೆಳಕಂಡ ವಿಶೇಷ ಗುಂಪುಗಳಿಗೆ ಕಾಯ್ದಿರಿಸಲಾಗಿರುವ ಶೇಕಡಾ 1.00 ರಷ್ಟು ಸೀಟುಗಳನ್ನು ಪ್ರಚಲಿತ ನಿಯಮದನ್ವಯ ತುಂಬಲಾಗುವುದು.

| | | |
|---|---|---|
| 1 | ರಕ್ಷಣಾದಳದ ವ್ಯಕ್ತಿ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.13 % |
| 2 | ಮಾಜಿಸೈನಿಕ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.15 % |

| | | |
|---|---|---|
| 3 | ಗಡಿನಾಡು ಕನ್ನಡಿಗ | 0.10 % |
| 4 | ಹೊರನಾಡು ಕನ್ನಡಿಗ | 0.10 % |
| 5 | ಎನ್.ಸಿ.ಸಿ. ಕೆಡೆಟ್ಸ್ | 0.15 % |
| 6 | ಎನ್.ಎಸ್.ಎಸ್. ಸ್ವಯಂ ಸೇವಕರು | 0.13 % |
| 7 | ಕ್ರೀಡಾಪಟುಗಳು | 0.24 % |

ವಿಶೇಷ ಗುಂಪುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ನಂತರ ಉಳಿಯುವ ಸರ್ಕಾರಿ ಸೀಟುಗಳನ್ನು ಮೆರಿಟ್ ಹಾಗೂ ಮೀಸಲಾತಿಯನ್ವಯ ಶೇಕಡ 50 ರಷ್ಟು ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಹಾಗೂ ಶೇಕಡ 50 ರಷ್ಟು ವಿಜ್ಞಾನ ವಿಭಾಗಕ್ಕೆ ಹಂಚಿಕೆ ಮಾಡಲಾಗುವುದು.

ಆದರೆ ವಿಜ್ಞಾನ ವಿಭಾಗದ ಒಟ್ಟು ಸೀಟುಗಳ ಪೈಕಿ ಶೇಕಡಾ 60 ರಷ್ಟು ಸೀಟುಗಳನ್ನು ಪಿ.ಸಿ.ಎಂ. ಗುಂಪಿನಿಂದಲೂ ಹಾಗೂ ಶೇಕಡ 40 ರಷ್ಟು ಸೀಟುಗಳನ್ನು ಸಿ.ಬಿ.ಝಡ್ ಗುಂಪಿನಿಂದಲೂ ಆಯ್ಕೆ ಮಾಡಲಾಗುವುದು. ಯಾವುದೇ ಒಂದು ಗುಂಪಿನಲ್ಲಿ ಅಂದರೆ ಪಿ.ಸಿ.ಎಂ. ಅಥವಾ ಸಿ.ಬಿ.ಝಡ್ ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದೇ ಇದ್ದ ಪಕ್ಷದಲ್ಲಿ ಅಂತಹ ಸೀಟುಗಳನ್ನು ಅದೇ ವಿಭಾಗದ ಮತ್ತೊಂದು ಗುಂಪಿನಿಂದ ಆಯ್ಕೆ ಮಾಡಲಾಗುವುದು.

**ಸೂಚನೆ:** ಹೈದ್ರಾಬಾದ್ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.

## ವಿವಿಧ ಪ್ರವರ್ಗಗಳಿಗೆ ಮೀಸಲಾತಿ:

ವಿವಿಧ ಪ್ರವರ್ಗಗಳಿಗೆ ಈ ಕೆಳಕಂಡಂತೆ ಮೀಸಲಾತಿಯನ್ನು ಅನುಸರಿಸಲಾಗುವುದು. ಆಗಿಂದಾಗ್ಗೆ ಹೊರಡಿಸಲಾಗುವ ಸರ್ಕಾರಿ ಆದೇಶಗಳ ಮೇರೆಗೆ ಮೀಸಲಾತಿಯಲ್ಲಿ ಬದಲಾವಣೆಯಾಗಬಹುದು.

| | | |
|---|---|---|
| 1 | ಸಾಮಾನ್ಯ ವರ್ಗ | ಶೇಕಡಾ 50 |
| 2 | ಪರಿಶಿಷ್ಟ ಜಾತಿ | ಶೇಕಡಾ 15 |
| 3 | ಪರಿಶಿಷ್ಟ ಪಂಗಡ | ಶೇಕಡಾ 03 |
| 4 | ಪ್ರವರ್ಗ–1 | ಶೇಕಡಾ 04 |
| 5 | ಪ್ರವರ್ಗ–2ಎ | ಶೇಕಡಾ 15 |
| 6 | ಪ್ರವರ್ಗ–2ಬಿ | ಶೇಕಡಾ 04 |
| 7 | ಪ್ರವರ್ಗ–3ಎ | ಶೇಕಡಾ 04 |
| 8 | ಪ್ರವರ್ಗ–3ಬಿ | ಶೇಕಡಾ 05 |

ಮೇಲ್ಕಂಡ ಮೀಸಲಾತಿ ಅನ್ವಯ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮೀಸಲಾತಿಯನ್ನು ಲಭ್ಯವಿರುವ ಮಿತಿಗೆ ಸೀಮಿತಗೊಳಿಸಿ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ತುಂಬಲಾಗುವುದು.

ಪ್ರವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಸಂಬಂಧಿಸಿದ ಪ್ರವರ್ಗದ ಜಾತಿ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು. ತಪ್ಪಿದಲ್ಲಿ ದಾಖಲಾತಿ ನೀಡಲಾಗುವುದಿಲ್ಲ.

**ಸೂಚನೆ:** ಹೈದ್ರಾಬಾದ್ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.

**ಒಳ ಮೀಸಲಾತಿಗಳು:**

| | | |
|---|---|---|
| ಕನ್ನಡ ಮಾಧ್ಯಮದ | ಶೇ. 5 | 1 ರಿಂದ 10 ನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ |

| | | |
|---|---|---|
| ಮೀಸಲಾತಿ | ರಷ್ಟು | ಮಾಡಿದವರಿಗೆ |
| ಮಹಿಳಾ ಮೀಸಲಾತಿ | ಶೇ.30 ರಷ್ಟು | ಮಹಿಳಾ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಪುರುಷ ಅಭ್ಯರ್ಥಿಗಳಿಂದ ತುಂಬಲಾಗುವುದು. |
| ಅಂಗವಿಕಲ ಅಭ್ಯರ್ಥಿಗಳಿಗೆ | ಶೇ. 3 ರಷ್ಟು | ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 50 ಎಸ್‌ಆರ್‌ಆರ್ 2007 ದಿನಾಂಕ : 26–07–2011 ರನ್ವಯ ಅಂಗವಿಕಲ ಅಭ್ಯರ್ಥಿಗಳಿಗೆ ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ ಸರ್ಕಾರಿ ಕೋಟಾ ಸೀಟುಗಳ ಗರಿಷ್ಠ ಶೇಕಡಾ 3 ರಷ್ಟು ಸೀಟುಗಳನ್ನು ಮೀಸಲಾಗಿಡಲಾಗುತ್ತದೆ. |

ಅಂಗವಿಕಲ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಇತರ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು (ಅನುಬಂಧದಲ್ಲಿ ನೀಡಿರುವ ನಮೂನೆಯಲ್ಲಿ) ಕಡ್ಡಾಯವಾಗಿ ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು. ಈ ಪ್ರಮಾಣ ಪತ್ರದಲ್ಲಿ ಅಂಗವಿಕಲತೆಯ ಶೇಕಡಾ ಪ್ರಮಾಣವು ನಮೂದಿತವಾಗಿರಬೇಕು. ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿರುವ ಅಂಗವಿಕಲ ಅಭ್ಯರ್ಥಿಗಳನ್ನು ಮಾತ್ರ ಅಂಗವಿಕಲ ಮೀಸಲಾತಿಯಲ್ಲಿ ಪರಿಗಣಿಸಲಾಗುವುದು. ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸದಿರುವ ಅಂಗವಿಕಲ ಅಭ್ಯರ್ಥಿಗಳನ್ನು ಅಂಗವಿಕಲ ಮೀಸಲಾತಿಯಲ್ಲಿ ಪರಿಗಣಿಸಲಾಗುವುದಿಲ್ಲ.

ಶ್ರವಣ ದೋಷದ ಅಭ್ಯರ್ಥಿಗಳು ತಮ್ಮ ಸ್ವಂತ ಜವಾಬ್ದಾರಿಯೊಂದಿಗೆ ನಿಮ್ಹಾನ್ಸ್ ಆಸ್ಪತ್ರೆ **(NIMHANS HOSPITAL)** ಹೊಸೂರು ರಸ್ತೆ, ಬೆಂಗಳೂರು ಅಥವಾ ಸಂಜಯಗಾಂಧಿ ಅಪಘಾತ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆ, ಜಯನಗರ ಈಸ್ಟ್, ಭೈರಸಂದ್ರ, ಬೆಂಗಳೂರು ಇಲ್ಲಿ ಆಡಿಯೋಗ್ರಾಂ ಪರೀಕ್ಷೆಗೆ ಒಳಪಟ್ಟು, ಅವರು ನೀಡುವ ವರದಿಯನ್ನು ಜಿಲ್ಲಾ ವೈದ್ಯಕೀಯ ಮಂಡಳಿಯ ಮುಂದೆ ಹಾಜರು ಪಡಿಸಿ, ಜಿಲ್ಲಾ ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು (ಅನುಬಂಧದಲ್ಲಿ ನೀಡಿರುವ ನಮೂನೆಯಲ್ಲಿ) ದಾಖಲಾತಿ ಸಮಯದಲ್ಲಿ ಇತರ ಮೂಲ ದಾಖಲೆಗಳೊಂದಿಗೆ ಸಲ್ಲಿಸಬೇಕು.

ಶಿಕ್ಷಣ ಮಹಾವಿದ್ಯಾಲಯಗಳ ವಿವರಗಳನ್ನು ಈ ಮಾಹಿತಿ ಪುಸ್ತಿಕೆಯೊಂದಿಗೆ ನೀಡಲಾಗಿದೆ. ಇದರಲ್ಲಿ ನೀಡಲಾಗಿರುವ ಮಾಹಿತಿಯು 2014–15 ನೇ ಸಾಲಿಗೆ ಸಂಬಂಧಿಸಿರುತ್ತದೆ. ವಿವಿಧ ವಿಶ್ವವಿದ್ಯಾಲಯಗಳಿಂದ ಅಫಿಲಿಯೇಷನ್ ಹೊಂದಿರುವ ಸಂಸ್ಥೆಗಳ ಹೆಸರಿನ ಪಟ್ಟಿಗಳ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ನೀಡಲಾಗಿದೆ .(ಬಿ.ಇಡಿ ಅಧಿಸೂಚನೆ ಹೊರಡಿಸಿರುವ ದಿನಾಂಕದವರೆಗೆ/ವೆಬ್‌ಸೈಟ್‌ಗೆ ಅಫ್ ಲೋಡ್ ಮಾಡುವವರೆಗೆ ಪಡೆದಿರುವ ಪಟ್ಟಿಗಳ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ನೀಡಲಾಗಿದೆ).

**ಆಯ್ಕೆಯ ವಿಧಾನ ಮತ್ತು ಅಂತಿಮ ಪಟ್ಟಿಗಳ ಪ್ರಕಟಣೆ:**

ಅಭ್ಯರ್ಥಿಗಳಿಂದ ಸ್ವೀಕೃತಿಯಾದ ಎಲ್ಲಾ ಆನ್‌ಲೈನ್ ಅರ್ಜಿಗಳನ್ನು ವಿಶೇಷಾಧಿಕಾರಿಗಳ ಕಛೇರಿಯಲ್ಲಿ ಪರಿಶೀಲಿಸಲಾಗುವುದು. ಅಭ್ಯರ್ಥಿಗಳು ಅರ್ಜಿಗಳಲ್ಲಿ ನೀಡಿರುವ ಮಾಹಿತಿಯ ಆಧಾರದ ಮೇಲೆ ಮೆರಿಟ್ ಮತ್ತು ಮೀಸಲಾತಿ ಮತ್ತು ಆದ್ಯತೆಯ ಅನ್ವಯ ಸಂಸ್ಥೆ ಹಂಚಿಕೆ ಸಹಿತ ಅಂತಿಮ ಆಯ್ಕೆ ಪಟ್ಟಿಯನ್ನು, ಅರ್ಹತಾ ಪಟ್ಟಿಯನ್ನು ಮತ್ತು ತಿರಸ್ಕೃತ ಪಟ್ಟಿಗಳನ್ನು ಹಾಗೂ ಅಭ್ಯರ್ಥಿಗಳ ರ್‍ಯಾಂಕ್ ಪಟ್ಟಿಗಳನ್ನು ನಿಗದಿತ ದಿನಾಂಕದಂದು ಎಲ್ಲಾ ವ್ಯವಸ್ಥಾಪಕ ಕೇಂದ್ರಗಳಲ್ಲಿ ಹಾಗೂ ಇಲಾಖಾ ವೆಬ್ ಸೈಟ್ www.schooleducation.kar.nic.in ರಲ್ಲಿ ಪ್ರಕಟಿಸಲಾಗುವುದು.

## ಆಕ್ಷೇಪಣೆ ಸಲ್ಲಿಸುವ ವಿಧಾನ

ಪಟ್ಟಿಗಳನ್ನು ಪ್ರಕಟಿಸಿದ ನಂತರ ಅಭ್ಯರ್ಥಿಗಳು ತಾವು ಒದಗಿಸಿರುವ ಮಾಹಿತಿಗಳ ಬಗ್ಗೆ ಏನಾದರೂ ವ್ಯತ್ಯಾಸ ಅಥವಾ ದೋಷಗಳಿದ್ದಲ್ಲಿ ಆಕ್ಷೇಪಣೆಯನ್ನು ಸಲ್ಲಿಸಬಹುದು.

ಪ್ರಕಟಿಸಿರುವ ಪಟ್ಟಿಗಳಲ್ಲಿ ಅಭ್ಯರ್ಥಿಗಳು ತಾವು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಯ ದೋಷದಿಂದಾಗಿ ಆಯ್ಕೆಯಲ್ಲಿ ಅನಾನುಕೂಲವಾಗಿದ್ದಲ್ಲಿ ಈಗಾಗಲೇ ಪ್ರಕಟಿಸಿರುವ ಆಯ್ಕೆ ಪಟ್ಟಿಗೆ ದಕ್ಕೆಯಾಗದಂತೆ ಮುಂದಿನ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರನ್ನು ಸೇರಿಸಲಾಗುವುದು. ಪಟ್ಟಿಯನ್ನು ಪ್ರಕಟಿಸಿದ ಏಳು ಕೆಲಸದ ದಿವಸಗಳೊಳಗಾಗಿ ಆಕ್ಷೇಪಣೆಯನ್ನು ಸಾಬೀತುಪಡಿಸುವ ಎಲ್ಲಾ ಮೂಲ ದಾಖಲೆಗಳ ಹಾಗೂ ಇತರೆ ಮೂಲ ದಾಖಲೆಗಳ ಒಂದು ಸೆಟ್ ಸ್ವದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಮನವಿಯ ಪತ್ರದೊಂದಿಗೆ ಸಂಬಂಧಪಟ್ಟ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಬೇಕು. ಆಕ್ಷೇಪಣೆಯೊಂದಿಗೆ ಸಲ್ಲಿಸುವ ಜೆರಾಕ್ಸ್ ಪ್ರತಿಗಳನ್ನು ಹಿಂದಿರುಗಿಸಲಾಗುವುದಿಲ್ಲ. ಆಕ್ಷೇಪಣೆ ಸಲ್ಲಿಸಿರುವ ಮತ್ತು ಸಲ್ಲಿಸದಿರುವ ಅಭ್ಯರ್ಥಿಗಳು ಸಹ ಅವರ ಮೀಸಲಾತಿ / ಮೆರಿಟ್ ಅನ್ವಯ ರ್‍ಯಾಂಕ್ ಆಧಾರದ ಮೇಲೆ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿ ನಡೆಯುವ ಕೌನ್ಸಿಲಿಂಗ್‌ನಲ್ಲಿ ನಿಗದಿತ ದಿನಾಂಕದಂದು ಭಾಗವಹಿಸಬಹುದು.

ಅಂತಿಮ ಆಯ್ಕೆ ಪಟ್ಟಿಯಲ್ಲಿ ಹಂಚಿಕೆಯಾದ ಸಂಸ್ಥೆಯಲ್ಲಿ ದಾಖಲಾಗಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಎಲ್ಲಾ ಮೂಲ ದಾಖಲೆಗಳು ಹಾಗೂ ಅವುಗಳ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಿ ಹಾಗೂ ವ್ಯವಸ್ಥಾಪಕ ಕೇಂದ್ರದಲ್ಲಿ ನೀಡುವ ಸೂಚನೆಯನುಸಾರ ದಾಖಲಾತಿ ಶುಲ್ಕವನ್ನು ಪಾವತಿಸಿ ನಿಗದಿತ ದಿನಾಂಕದೊಳಗೆ ದಾಖಲಾಗುವುದು.

ಸಂಸ್ಥೆ ಹಂಚಿಕೆ ಸಹಿತ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿದ್ದು, ಹಂಚಿಕೆಯಾದ ಸಂಸ್ಥೆ ಒಪ್ಪಿಗೆ ಇಲ್ಲದಿದ್ದ ಅಭ್ಯರ್ಥಿಗಳು ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ನಡೆಯುವ ಕೌನ್ಸಿಲಿಂಗ್‌ನಲ್ಲಿ ತಮ್ಮ ರ್‍ಯಾಂಕಿನ್ವಯ ಭಾಗವಹಿಸಿ ಲಭ್ಯವಿರುವ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಅಭ್ಯರ್ಥಿಗಳ ಎಲ್ಲಾ ಮೂಲ ದಾಖಲೆಗಳನ್ನು ವ್ಯವಸ್ಥಾಪಕ ಕೇಂದ್ರ (ಡಯಟ್/ಸಿಟಿಇ)/ ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ಪರಿಶೀಲಿಸಲಾಗುವುದು. ಮೂಲದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನೀಡಿರುವ ಮಾಹಿತಿಗೂ ಮೂಲ ದಾಖಲೆಗಳಲ್ಲಿರುವ ಮಾಹಿತಿಗೂ ವ್ಯತ್ಯಾಸವಿದ್ದು, ಅಭ್ಯರ್ಥಿ ದಾಖಲಾತಿಗೆ ಬೇಕಾಗುವ ಅರ್ಹತೆ ಕಳೆದುಕೊಂಡಲ್ಲಿ ದಾಖಲಾತಿ ನೀಡಲಾಗುವುದಿಲ್ಲ ಅಥವಾ ಮಾಹಿತಿಯಲ್ಲಿ ಏನಾದರೂ ವ್ಯತ್ಯಾಸ ಬಂದು ರ್‍ಯಾಂಕ್‌ನಲ್ಲಿ ಏರುಪೇರಾದಲ್ಲಿ ಅಂತಹ ಅಭ್ಯರ್ಥಿಯು ತನ್ನ ರ್‍ಯಾಂಕಿಗೆ ಅನುಗುಣವಾಗಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಅಭ್ಯರ್ಥಿಗಳು ಈಗಾಗಲೇ ಅರ್ಜಿಯಲ್ಲಿ ನೀಡಿರುವ ಆದ್ಯತಾನುಸಾರ ಸೀಟುಗಳ ಲಭ್ಯತೆಯ ಆಧಾರದ ಮೇರೆಗೆ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

## <u>ಸೀಟು ಹಂಚಿಕೆ:</u>

1. ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿರುವ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ದಾಖಲಾತಿಗೆ ಅರ್ಹತೆ ಹೊಂದಿದ್ದಲ್ಲಿ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇರೆಗೆ ಅಭ್ಯರ್ಥಿಗಳು ಅವರ ಅರ್ಜಿಯಲ್ಲಿ ಆದ್ಯತೆ ನೀಡಿರುವ ಸಂಸ್ಥೆಗಳ ಮಿತಿಯಲ್ಲಿ ಸೀಟುಗಳನ್ನು ಹಂಚಿಕೆ ಮಾಡಿ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.
2. ಈ ಪಟ್ಟಿಯಲ್ಲಿ ಸಂಸ್ಥೆ ಹಂಚಿಕೆಯಾಗಿರುವ ಅಭ್ಯರ್ಥಿಗಳು ಇಚ್ಛೆಪಟ್ಟಲ್ಲಿ ಸಂಬಂಧಪಟ್ಟ ವ್ಯವಸ್ಥಾಪಕ ಕೇಂದ್ರದಲ್ಲಿ (ಡಯಟ್ / ಸಿಟಿಇ) ಮೂಲ ದಾಖಲೆಗಳನ್ನು ಸಲ್ಲಿಸಿ, ದಾಖಲಾತಿ ಶುಲ್ಕ ಪಾವತಿಸುವ ತ್ರಿಪ್ರತಿ ಚಲನ್ ಪಡೆದು, ನಿಗದಿತ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಶಾಖೆಯಲ್ಲಿ ಶುಲ್ಕ ಪಾವತಿ ಮಾಡಿ, ಪಾವತಿಸಿದ ಶುಲ್ಕದ ಚಲನ್‌ಪ್ರತಿಯನ್ನು ವ್ಯವಸ್ಥಾಪಕ ಕೇಂದ್ರಗಳಲ್ಲಿ ನೀಡಿ ದಾಖಲಾತಿ ಪತ್ರವನ್ನು ಪಡೆದು, ಸಂಬಂಧಪಟ್ಟ ಬಿ.ಇಡಿ. ಶಿಕ್ಷಣ ಸಂಸ್ಥೆಯಲ್ಲಿ ಎಲ್ಲಾ ಮೂಲ ದಾಖಲೆಗಳನ್ನು ಹಾಗೂ ದಾಖಲಾತಿ ಪತ್ರವನ್ನು ಸಲ್ಲಿಸಿ ನಿಗದಿತ ದಿನಾಂಕದೊಳಗೆ ವರದಿ ಮಾಡಿಕೊಳ್ಳುವುದು. ನಿಗದಿತ ದಿನಾಂಕದೊಳಗೆ ವರದಿ ಮಾಡಿಕೊಳ್ಳಲು ತಪ್ಪಿದ್ದಲ್ಲಿ ದಾಖಲಾತಿಯನ್ನು ರದ್ದುಪಡಿಸಲಾಗುವುದು.

## ಶುಲ್ಕದ ವಿವರ

| ಕಲಾ ವಿಭಾಗ | | ವಿಜ್ಞಾನ ವಿಭಾಗ | |
|---|---|---|---|
| **ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ** | **ರೂ. 5000/-** | **ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ** | **ರೂ. 5150/-** |
| **ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ** | **ರೂ. 6000/-** | **ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ** | **ರೂ. 6150/-** |
| **ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ** | **ರೂ. 10000/-** | **ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ** | **ರೂ. 10150/-** |

ದಾಖಲಾತಿ ಶುಲ್ಕವನ್ನು ಸರ್ಕಾರವು ಪುನರ್ ನಿಗದಿಪಡಿಸಿದಲ್ಲಿ ಇದನ್ನು ಅಭ್ಯರ್ಥಿಗಳಿಗೆ ಮುಂದೆ ತಿಳಿಸಲಾಗುವುದು.

### ಕೌನ್ಸಿಲಿಂಗ್:

ಸಂಸ್ಥೆ ಹಂಚಿಕೆ ಸಹಿತ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿದ್ದು, ಹಂಚಿಕೆಯಾದ ಸಂಸ್ಥೆ ಒಪ್ಪಿಗೆ ಇಲ್ಲದಿದ್ದ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ತಮ್ಮ ರ್‍ಯಾಂಕ್ ಅನ್ನು ಗಮನಿಸಿ ಕೌನ್ಸಿಲಿಂಗ್ ವೇಳಾಪಟ್ಟಿಯನ್ವಯ ನಿಗದಿತ ದಿನಾಂಕಗಳಲ್ಲಿ ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ. ರಸ್ತೆ, ಬೆಂಗಳೂರು ಇಲ್ಲಿ ನಡೆಯುವ ಕೌನ್ಸಿಲಿಂಗ್‌ನಲ್ಲಿ ತಮ್ಮ ಸ್ವಂತ ಖರ್ಚಿನಿಂದ ಭಾಗವಹಿಸುವುದು.

ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿ ಸಂಸ್ಥೆ ಹಂಚಿಕೆಯಾಗಿದ್ದು, ಅಭ್ಯರ್ಥಿಯು ಹಂಚಿಕೆಯಾದ ಸಂಸ್ಥೆಗೆ ದಾಖಲಾಗದೆ ಕೌನ್ಸಿಲಿಂಗ್‌ಗೆ ದಾಖಲಾಗಲು ಇಚ್ಛಿಸಿದಲ್ಲಿ ಅಂತಹ ಅಭ್ಯರ್ಥಿಗಳಿಗೆ ಅಂತಿಮ ಆಯ್ಕೆಪಟ್ಟಿಯಲ್ಲಿ ಹಂಚಿಕೆ ಮಾಡಿದ್ದ ಸಂಸ್ಥೆಯನ್ನು ರದ್ದುಪಡಿಸಲಾಗುತ್ತದೆ.

ಕೌನ್ಸಿಲಿಂಗ್ ವೇಳಾಪಟ್ಟಿಯನ್ನು ಸಂಸ್ಥೆ ಹಂಚಿಕೆ ಸಹಿತ ಅಂತಿಮ ಆಯ್ಕೆಪಟ್ಟಿಯೊಡನೆ ಎಲ್ಲಾ ವ್ಯವಸ್ಥಾಪಕ ಕೇಂದ್ರಗಳಲ್ಲಿ ಹಾಗೂ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಅನಿವಾರ್ಯ ಕಾರಣಗಳಿಂದ ಕೌನ್ಸಿಲಿಂಗ್ ವೇಳಾಪಟ್ಟಿಯಲ್ಲಿ ಬದಲಾವಣೆಯಾದಲ್ಲಿ ದಿನಪತ್ರಿಕೆಗಳಲ್ಲಿ ಹಾಗೂ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿ ಬದಲಾದ ದಿನಾಂಕಗಳನ್ನು ಪ್ರಕಟಿಸಲಾಗುವುದು. ಅಭ್ಯರ್ಥಿಗಳಿಗೆ ಈ ಬಗ್ಗೆ ಯಾವುದೇ ರೀತಿಯ ಮಾಹಿತಿಯನ್ನು ವೈಯುಕ್ತಿಕವಾಗಿ ನೀಡಲಾಗುವುದಿಲ್ಲ.

ಕೌನ್ಸಿಲಿಂಗ್‌ನಲ್ಲಿ ಅಭ್ಯರ್ಥಿಗಳು ಮೆರಿಟ್ ಅನ್ವಯ ಲಭ್ಯವಿರುವ ಸೀಟುಗಳನ್ನು ಆಯ್ಕೆಮಾಡಿಕೊಳ್ಳುವುದು. ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಿ ದಾಖಲಾತಿಗೆ ಅರ್ಹತೆ ಇದ್ದಲ್ಲಿ ಮಾತ್ರ ಸೀಟನ್ನು ಹಂಚಿಕೆ ಮಾಡಲಾಗುವುದು.

ಅಭ್ಯರ್ಥಿಗೆ ಅರ್ಜಿಯಲ್ಲಿ ನೀಡಿರುವ ಮಾಹಿತಿಯ ಆಧಾರದ ಮೇಲೆ ರ್‍ಯಾಂಕ್ ನೀಡಿರುವುದರಿಂದ, ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ತಾವು ನೀಡಿರುವ ಮಾಹಿತಿಗಳಲ್ಲಿ ಏನಾದರೂ ದೋಷ ಅಥವಾ ವ್ಯತ್ಯಾಸ ಕಂಡು ಬಂದಲ್ಲಿ ಅಭ್ಯರ್ಥಿಯ ಮೆರಿಟ್ ಅನ್ವಯ ರ್‍ಯಾಂಕ್‌ನಲ್ಲಿ ವ್ಯತ್ಯಾಸವಾಗಬಹುದು. ಹೀಗೆ ವ್ಯತ್ಯಾಸವಾದಾಗ ಹೊಸದಾಗಿ ನೀಡಿದ ರ್‍ಯಾಂಕಿಗೆ ಅನುಗುಣವಾಗಿ ಮೆರಿಟ್ ಅನ್ವಯ ನಿಗದಿತ ದಿನಾಂಕದಂದು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಲಭ್ಯವಿರುವ ಸೀಟನ್ನು ಆಯ್ಕೆಮಾಡಿಕೊಳ್ಳಬಹುದು.

ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಯು ದಾಖಲಾತಿಗೆ ನಿಗದಿ ಪಡಿಸಿರುವ ಅರ್ಹತೆಯನ್ನು ಕಳೆದುಕೊಂಡು ಅನರ್ಹನಾದಲ್ಲಿ ದಾಖಲಾತಿಯನ್ನು ನೀಡಲಾಗುವುದಿಲ್ಲ.

ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿ ನೀಡಿರುವ ಮಾಹಿತಿಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದು ಅವನ ರ್‍ಯಾಂಕಿಂಗ್‌ನಲ್ಲಿ ಏರುಪೇರಾಗಿ ಹೊಸದಾಗಿ ನೀಡಿರುವ ರ್‍ಯಾಂಕ್ ಉತ್ತಮಗೊಂಡಾಗ ಆ ಅಭ್ಯರ್ಥಿಗೆ ಆ ದಿನವೇ ಕೌನ್ಸಿಲಿಂಗ್ ನಡೆಸಲಾಗುವುದು.

ಅಂಗವಿಕಲ ಮತ್ತು ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಅವರು ಆದ್ಯತಾನು ಸಾರವಾಗಿ ಗುರುತಿಸಿರುವ ಸಂಸ್ಥೆಯನ್ನೇ ಹಂಚಿಕೆ ಮಾಡಿರುವುದರಿಂದ ಕೌನ್ಸಿಲಿಂಗ್‌ನಲ್ಲಿ ಅವರಿಗೆ ಆದ್ಯತೆಯನ್ನು ನೀಡಲಾಗುವುದಿಲ್ಲ. ಇವರೂ ಸಹ ತಮ್ಮ ರ್‍ಯಾಂಕ್‌ನ ಅನ್ವಯ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಬಹುದು.

ಕೌನ್ಸಿಲಿಂಗ್ ಅನ್ನು ಮೆರಿಟ್ ಅನ್ವಯ ರ್‍ಯಾಂಕ್ ಆಧಾರದ ಮೇಲೆ ಮೊದಲು ವಿಜ್ಞಾನ ವಿಭಾಗದ ಅಭ್ಯರ್ಥಿಗಳಿಗೆ ನಡೆಸಲಾಗುವುದು. ವಿಜ್ಞಾನ ವಿಭಾಗದ ಎಲ್ಲಾ ಸೀಟುಗಳು ತುಂಬಿದ ನಂತರ ಅಥವಾ ವಿಜ್ಞಾನ ವಿಭಾಗದ ಎಲ್ಲಾ ಅರ್ಹ ಅಭ್ಯರ್ಥಿಗಳಿಗೆ ಅವಕಾಶ ನೀಡಿದ ನಂತರ ಕಲಾ /ವಾಣಿಜ್ಯ ವಿಭಾಗದ ಎಲ್ಲಾ ಅಭ್ಯರ್ಥಿಗಳಿಗೆ ಮೆರಿಟ್ ಅನ್ವಯ ರ್‍ಯಾಂಕ್ ಆಧಾರದ ಮೇಲೆ ಕೌನ್ಸಿಲಿಂಗ್ ನಡೆಸಲಾಗುವುದು.

ಕೌನ್ಸಿಲಿಂಗ್‌ನಲ್ಲಿ ಮೂಲ ದಾಖಲೆಗಳ ಪರಿಶೀಲನೆಯ ನಂತರ ಸೀಟು ಆಯ್ಕೆಮಾಡಿಕೊಂಡು ಶುಲ್ಕ ಪಾವತಿಸಿದ ಅಭ್ಯರ್ಥಿಗಳಿಗೆ ದಾಖಲಾತಿ ಪತ್ರದೊಂದಿಗೆ ಮೂಲ ದಾಖಲೆಗಳನ್ನು ಕೂಡಲೇ ಹಿಂದಿರುಗಿಸಲಾಗುವುದು. ದಾಖಲಾತಿ ಪತ್ರದೊಂದಿಗೆ ತಮ್ಮ ಮೂಲ ದಾಖಲೆಗಳನ್ನು ಅಭ್ಯರ್ಥಿಗಳು ತಾವು ಆಯ್ಕೆಮಾಡಿಕೊಂಡ ಶಿಕ್ಷಣ ಸಂಸ್ಥೆಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಿ ವರದಿ ಮಾಡಿಕೊಳ್ಳುವುದು.

ಸರ್ಕಾರಿ ಕೋಟಾದಲ್ಲಿನ ಎಲ್ಲಾ ಪ್ರವರ್ಗಗಳ ಸೀಟುಗಳು ಭರ್ತಿಯಾಗುವವರೆಗೂ ರ್‍ಯಾಂಕ್ ಆಧಾರದ ಮೇಲೆ ಕೌನ್ಸಿಲಿಂಗ್ ಮುಂದುವರೆಸಲಾಗುವುದು ಕೌನ್ಸಿಲಿಂಗ್‌ನ ವಸ್ತುಸ್ಥಿತಿಯನ್ನು ಮತ್ತು ಪ್ರತಿ ಪ್ರವರ್ಗದಲ್ಲಿ ಲಭ್ಯವಿರುವ ಸೀಟುಗಳ ವಿವರವನ್ನು ಆಯಾ ದಿನ ಸಂಜೆ ಕೇಂದ್ರೀಕೃತ ದಾಖಲಾತಿ ಘಟಕದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಇದನ್ನು ಗಮನಿಸಿ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಬಹುದು.

**ಕೌನ್ಸಿಲಿಂಗ್‌ಗೆ ಅರ್ಹರಲ್ಲದ ಅಭ್ಯರ್ಥಿಗಳು:**

1. ಬಿ.ಇಡಿ. ದಾಖಲಾತಿಗೆ ಅರ್ಹತೆಯನ್ನು ಹೊಂದಿಲ್ಲದ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿಲ್ಲ.
2. ವ್ಯವಸ್ಥಾಪಕ ಕೇಂದ್ರದಲ್ಲಿ ದಾಖಲಾದ ಅಭ್ಯರ್ಥಿಗಳಿಗೆ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿ ನಡೆಯುವ ಕೌನ್ಸಲಿಂಗ್‌ಗೆ ಹಾಜರಾಗಲು ಅವಕಾಶವಿರುವುದಿಲ್ಲ.
3. ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿ ಕೌನ್ಸಲಿಂಗ್‌ಗೆ ನಿಗದಿತ ದಿನಾಂಕದಂದು ಗೈರು ಹಾಜರಾದ ಅಭ್ಯರ್ಥಿಗಳಿಗೆ ಅಥವಾ ಕೌನ್ಸಲಿಂಗ್‌ಗೆ ಹಾಜರಾಗಿ ಹಂಚಿಕೆಯಾದ ಸೀಟನ್ನು ತಿರಸ್ಕರಿಸಿದ ಅಭ್ಯರ್ಥಿಗಳಿಗೆ ಮುಂದೆ ನಡೆಯುವ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

**ಕೌನ್ಸಿಲಿಂಗ್ ಪ್ರಕ್ರಿಯೆಯ ವಿವಿಧ ಹಂತಗಳು:**

ಸೂಚನಾ ಫಲಕದಲ್ಲಿ ಪ್ರಕಟಿಸಿದ ಪಟ್ಟಿಯಲ್ಲಿರುವ ನಿಮ್ಮ ನೋಂದಣಿ ಸಂಖ್ಯೆಯನ್ನು ಖಚಿತಪಡಿಸಿಕೊಳ್ಳಿರಿ. ನಿಮ್ಮ ಮೂಲದಾಖಲೆಗಳು, ಅವುಗಳ ಒಂದು ಸೆಟ್ ಜೆರಾಕ್ಸ್ ಪ್ರತಿಗಳು, ಆನ್‌ಲೈನ್ ಅರ್ಜಿಯ ಒಂದು ಪ್ರತಿ, ಅರ್ಜಿ ಶುಲ್ಕ ಪಾವತಿಸಿರುವ ಚಲನ್ ಇವುಗಳನ್ನು ಕ್ರಮವಾಗಿ ಜೋಡಿಸಿಕೊಂಡು ಕೌನ್ಸಿಲಿಂಗ್ ಸಭಾಂಗಣವನ್ನು ಪ್ರವೇಶಿಸುವುದು. ಪ್ರವೇಶ ದ್ವಾರದಲ್ಲಿ ನೀಡುವ ಪರಿಶೀಲನಾ ಪತ್ರವನ್ನು ಪಡೆದು ಮಾರ್ಗದರ್ಶನದಂತೆ ಭರ್ತಿ ಮಾಡುವುದು.

**1. ನೋಂದಣಿ (Registration)**

ಭರ್ತಿ ಮಾಡಿದ ಪರಿಶೀಲನಾ ಪತ್ರ, ಆನ್‌ಲೈನ್ ಅರ್ಜಿಯ ಒಂದು ಪ್ರತಿ, ಅರ್ಜಿ ಶುಲ್ಕ ಪಾವತಿಸಿರುವ ಚಲನ್ ಮತ್ತು ಎಲ್ಲಾ ಮೂಲದಾಖಲೆಗಳ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ನೀಡಿ ಅಭ್ಯರ್ಥಿ ನೋಂದಣಿ ಮಾಡಿಸಿಕೊಳ್ಳುವುದು.

↓

**2. ಮೂಲ ದಾಖಲೆಗಳ ಪರಿಶೀಲನೆ (Verification)**

ಭರ್ತಿ ಮಾಡಿದ ಪರಿಶೀಲನಾ ಪತ್ರದೊಡನೆ ಮೂಲದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಮತ್ತು ಮೂಲದಾಖಲೆಗಳನ್ನು ನಿಮ್ಮ ರ್‍ಯಾಂಕ್ ನಂಬರ್‌ನ್ನು ಕರೆದಾಗ ಪರಿಶೀಲನೆಗಾಗಿ ನೀಡುವುದು.

↓

**3. ಪ್ರದರ್ಶನ ಸಭಾಂಗಣ (Display Hall)**

ಪರಿಶೀಲನೆಯ ನಂತರ ವಿಶಾಲ ಪರದೆಯ ಮೇಲೆ ಪ್ರದರ್ಶಿಸಲ್ಪಡುವ ಸಂಸ್ಥಾವಾರು ಲಭ್ಯವಿರುವ ಸೀಟುಗಳನ್ನು ಗಮನಿಸಿ ಆದ್ಯತಾನುಸಾರವಾಗಿ ಗುರುತಿಸಿಕೊಳ್ಳುವುದು.

↓

**4. ಸೀಟುಗಳ ವಿಚಾರಣೆ ಹಾಗೂ ಹಂಚಿಕೆ (Seat Enquiry & Allotment)**
ಆದ್ಯತಾನುಸಾರವಾಗಿ ಲಭ್ಯವಿರುವ ಸೀಟುಗಳನ್ನು ವಿಚಾರಿಸಿ ನಂತರ ಹಂಚಿಕೆ ಮಾಡಿಸಿಕೊಳ್ಳುವುದು.

↓

**5. ದಾಖಲಾತಿ ಶುಲ್ಕ ಪಾವತಿ**
ಹಂಚಿಕೆಯಾದ ಶಿಕ್ಷಣ ಸಂಸ್ಥೆಗೆ ಅನುಗುಣವಾಗಿ ದಾಖಲಾತಿ ಶುಲ್ಕವನ್ನು ಬ್ಯಾಂಕ್ ಹುಂಡಿಯ ರೂಪದಲ್ಲಿ ನೀಡುವುದು.

↓

**6. ಮೂಲದಾಖಲೆಗಳನ್ನು ಹಿಂದಕ್ಕೆ ಪಡೆಯುವುದು**
ಬ್ಯಾಂಕ್ ಹುಂಡಿಯನ್ನು ನೀಡಿದ ನಂತರ ತಾವು ಸಲ್ಲಿಸಿದ ಮೂಲ ದಾಖಲೆಗಳನ್ನು ಶಿಕ್ಷಣ ಸಂಸ್ಥೆಗೆ ನೀಡಲು ಮರಳಿ ಪಡೆಯುವುದು.

↓

**7. ದಾಖಲಾತಿ ಪತ್ರ ಪಡೆಯುವುದು**
ಕೇಂದ್ರೀಕೃತ ದಾಖಲಾತಿ ಘಟಕದಿಂದ ನೀಡುವ ದಾಖಲಾತಿ ಪತ್ರವನ್ನು ಪಡೆಯುವುದು

↓

**8. ಹಂಚಿಕೆಯಾದ ಸಂಸ್ಥೆಯಲ್ಲಿ ವರದಿ ಮಾಡಿಕೊಳ್ಳುವುದು**
ದಾಖಲಾತಿ ಪತ್ರ ಹಾಗೂ ನಿಮ್ಮ ಮೂಲದಾಖಲೆಗಳನ್ನು ನೀಡಿ ದಾಖಲಾತಿ ಪತ್ರದಲ್ಲಿ ನೀಡಿರುವ ನಿಗದಿತ ದಿನಾಂಕದೊಳಗೆ ಹಂಚಿಕೆಯಾದ ಸಂಸ್ಥೆಯಲ್ಲಿ ವರದಿ ಮಾಡಿಕೊಳ್ಳುವುದು. ತಪ್ಪಿದಲ್ಲಿ ತಮ್ಮ ದಾಖಲಾತಿಯನ್ನು ರದ್ದು ಪಡಿಸಲಾಗುವುದು.

ವರದಿ ಮಾಡಿಕೊಂಡ ಸಂಸ್ಥೆಯಲ್ಲಿ ವಿಶ್ವವಿದ್ಯಾನಿಲಯ ಅಫಿಲಿಯೇಷನ್ ಶುಲ್ಕ ಹೊರತುಪಡಿಸಿ ಬೇರೆ ಯಾವುದೇ ರೀತಿಯ ಶುಲ್ಕವನ್ನು ಪಾವತಿಸಬಾರದು.

**ವಿ.ಸೂ:–** ಕೌನ್ಸಿಲಿಂಗ್‌ಗೆ ಹಾಜರಾದ ಮಾತ್ರಕ್ಕೆ ಅಭ್ಯರ್ಥಿಗೆ ಸೀಟಿನ ಮೇಲೆ ಯಾವ ಹಕ್ಕೂ ಇರುವುದಿಲ್ಲ. ಕೌನ್ಸಿಲಿಂಗ್‌ನಲ್ಲಿ ಮೂಲ ದಾಖಲೆಗಳ ಪರಿಶೀಲನೆಯ ನಂತರ ದಾಖಲಾತಿಗೆ ಅರ್ಹತೆ ಇದ್ದಲ್ಲಿ ಮಾತ್ರ ನಿಯಮಾನುಸಾರ ಸೀಟನ್ನು ಹಂಚಿಕೆ ಮಾಡಲಾಗುವುದು.

ತಿರಸ್ಕೃತ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳು ತಮ್ಮ ಬಗೆಗಿನ ಮಾಹಿತಿಗಳಲ್ಲಿ ಏನಾದರು ಲೋಪದೋಷಗಳಿದ್ದಲ್ಲಿ ಅವುಗಳನ್ನು ಸರಿಪಡಿಸಲು ಸಾಬೀತಾಗುವ ಎಲ್ಲಾ ಮೂಲ ದಾಖಲೆಗಳನ್ನು ತೆಗೆದುಕೊಂಡು ದಾಖಲಾತಿಗೆ ಅರ್ಹತೆ ಇದ್ದಲ್ಲಿ ತಮ್ಮ ಮೆರಿಟ್ ಅನ್ವಯ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವುದು. ಇಂತಹ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಿ ಅರ್ಹತೆ ಇದ್ದಲ್ಲಿ ಮೆರಿಟ್ ಅನ್ವಯ ರ್‍ಯಾಂಕ್ ನೀಡಲಾಗುವುದು. ರ್‍ಯಾಂಕಿನ ಆಧಾರದ ಮೇಲೆ ಕೌನ್ಸಿಲಿಂಗ್ ವೇಳಾಪಟ್ಟಿಯಲ್ಲಿ ನಿಗದಿಪಡಿಸಿರುವ ದಿನಾಂಕಗಳಂದು ಲಭ್ಯವಿರುವ ಸೀಟುಗಳನ್ನು ನೀಡಲಾಗುವುದು.

## ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳು ಶುಲ್ಕ ತುಂಬುವ ಕ್ರಮ:

ಕೌನ್ಸಿಲಿಂಗ್‌ಗೆ ಹಾಜರಾಗುವ ಎಲ್ಲಾ ಕಲಾ ವಿಭಾಗದ ಅಭ್ಯರ್ಥಿಗಳು 1) ರೂ. 5000/– 2) ರೂ.1000/– 3) ರೂ.4000/– ಹಾಗೂ ಎಲ್ಲಾ ವಿಜ್ಞಾನ ವಿಭಾಗದ ಅಭ್ಯರ್ಥಿಗಳು 1) ರೂ. 5150/– 2) ರೂ.1000/– 3) ರೂ.4000/– ಈ ಮೂರು ಮೊಬಲಗಿಗೆ ಸರಿಸಮನಾಗಿ ಪ್ರತ್ಯೇಕವಾಗಿ ಮೂರು ಬ್ಯಾಂಕ್ ಹುಂಡಿಗಳನ್ನು (ಡಿ.ಡಿ.ಯನ್ನು) ದಾಖಲಾತಿ ಶುಲ್ಕವಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯಾವುದೇ ಶಾಖೆಯಲ್ಲಿ **"ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು, (ಪೇಯಬಲ್ ಅಟ್ ಬೆಂಗಳೂರು) Special Officer, Centralised Admission Cell, Bangalore" (Payable at Bangalore)** ಇವರ ಹೆಸರಿಗೆ ತಪ್ಪದೇ ಖರೀದಿಸಿ ಕೌನ್ಸಿಲಿಂಗ್‌ಗೆ ಹಾಜರಾಗುವುದು. ಬ್ಯಾಂಕ್ ಹುಂಡಿಯನ್ನು ಅಭ್ಯರ್ಥಿಯ ಸ್ವಂತ ಜಿಲ್ಲೆಯಲ್ಲಾಗಲಿ ಅಥವಾ ತಮಗೆ ಅನುಕೂಲಕರವಾದ ಸ್ಥಳದಲ್ಲಿ ಖರೀದಿಸಬಹುದು. ಕೌನ್ಸಿಲಿಂಗ್ ಮುಖೇನ ಆಯ್ಕೆ ಮಾಡಿಕೊಂಡ

ಸಂಸ್ಥೆಗೆ ನಿಗದಿಪಡಿಸಿರುವ ಶುಲ್ಕಕ್ಕೆ ಸರಿಸಮನಾದ ಡಿ.ಡಿ.ಗಳನ್ನು ಪಡೆದುಕೊಂಡು ದಾಖಲಾತಿ ಪತ್ರವನ್ನು ನೀಡಲಾಗುವುದು.

ದಾಖಲಾತಿ ಪಡೆದ ಅಭ್ಯರ್ಥಿಗಳಿಗೆ ದಾಖಲಾತಿ ಪತ್ರದೊಂದಿಗೆ ಅವರ ಮೂಲದಾಖಲೆಗಳನ್ನು ಹಿಂದಿರುಗಿಸಲಾಗುವುದು.

ದಾಖಲಾದ ಅಭ್ಯರ್ಥಿಗಳು ದಾಖಲಾತಿ ಪತ್ರದೊಂದಿಗೆ ಮೂಲದಾಖಲೆಗಳನ್ನು, ತಮಗೆ ಹಂಚಿಕೆಯಾದ ಶಿಕ್ಷಣ ಸಂಸ್ಥೆಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಿ ವರದಿ ಮಾಡಿಕೊಳ್ಳುವುದು.

ಕೌನ್ಸಿಲಿಂಗ್ ಸಮಯದಲ್ಲಿ ಯಾವುದೇ ಕಾರಣಕ್ಕೂ ದಾಖಲಾತಿ ಶುಲ್ಕವನ್ನು ನಗದು ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ. ದಾಖಲಾತಿ ಶುಲ್ಕವನ್ನು ಸರ್ಕಾರವು ಪುನರ್ ನಿಗದಿ ಪಡಿಸಿದಲ್ಲಿ ಇದನ್ನು ಅಭ್ಯರ್ಥಿಗಳಿಗೆ ಮುಂದೆ ತಿಳಿಸಲಾಗುವುದು.

**ಸಲ್ಲಿಸಬೇಕಾದ ಮೂಲ ದಾಖಲೆಗಳು:**

ಅಭ್ಯರ್ಥಿಯು **Online** ಮೂಲಕ ಸಲ್ಲಿಸುವ ಅರ್ಜಿಯಲ್ಲಿನ ಮಾಹಿತಿಗಳ ಆಧಾರದ ಮೇರೆಗೆ ಆಯ್ಕೆಯನ್ನು ಮೆರಿಟ್ ಮತ್ತು ಮೀಸಲಾತಿ ಅನ್ವಯ ಮಾಡಲಾಗುವುದು. ಅಭ್ಯರ್ಥಿ ನೀಡಿರುವ ಮಾಹಿತಿಯು ತಪ್ಪಾಗಿದ್ದು ಅಥವಾ ದೋಷಪೂರಿತವಾಗಿದ್ದು ಅಥವಾ ಇಲಾಖೆಯು ತಪ್ಪಾಗಿ ಗ್ರಹಿಸಿ ಸೀಟು ನೀಡಿದ್ದಲ್ಲಿ ದಾಖಲಾತಿಯನ್ನು ಅನೂರ್ಜಿತಗೊಳಿಸಿ ಸೀಟನ್ನು ರದ್ದುಪಡಿಸಲಾಗುವುದು. ದಾಖಲಾತಿ ಬಯಸುವ ಎಲ್ಲಾ ಅಭ್ಯರ್ಥಿಗಳು ಈ ಕೆಳಕಂಡ ಹಾಗೂ ಅಭ್ಯರ್ಥಿಗಳಿಗೆ ಅನ್ವಯಿಸುವ ಮೂಲ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ವ್ಯವಸ್ಥಾಪಕ ಕೇಂದ್ರಗಳಲ್ಲಿ /ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ಪರಿಶೀಲನೆಗಾಗಿ ಕಡ್ಡಾಯವಾಗಿ ಹಾಜರು ಪಡಿಸುವುದು.

1. ಕ್ರೋಢೀಕೃತ ಎಸ್.ಎಸ್.ಎಲ್.ಸಿ. ಅಂಕಪಟ್ಟಿ
2. ದ್ವಿತೀಯ ಪಿ.ಯು.ಸಿ. ಅಂಕಪಟ್ಟಿ
3. ಮೂರುವರ್ಷಗಳ ಪದವಿಯ ಅಂಕಪಟ್ಟಿಗಳು (ಪುನರಾವರ್ತಿತ ಅಭ್ಯರ್ಥಿಗಳು ಪ್ರತೀ ವರ್ಷದ ಕ್ರೋಢೀಕೃತ ಅಂಕಪಟ್ಟಿಯನ್ನು ಅಥವಾ ಲಭ್ಯವಿಲ್ಲದಿದ್ದಲ್ಲಿ ಎಲ್ಲಾ ಪ್ರಯತ್ನಗಳ (**All Attempts**) ಅಂಕಪಟ್ಟಿಗಳನ್ನು ಲಗತ್ತಿಸುವುದು)
4. ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳು. (ಪುನರಾವರ್ತಿತ ಅಭ್ಯರ್ಥಿಗಳು ಪ್ರತೀ ವರ್ಷದ ಕ್ರೋಢೀಕೃತ ಅಂಕಪಟ್ಟಿಯನ್ನು ಅಥವಾ ಲಭ್ಯವಿಲ್ಲದಿದ್ದಲ್ಲಿ ಎಲ್ಲಾ ಪ್ರಯತ್ನಗಳ (**All Attempts**) ಅಂಕಪಟ್ಟಿಗಳನ್ನು ಲಗತ್ತಿಸುವುದು)
5. ಕರ್ನಾಟಕ ಅಭ್ಯರ್ಥಿ ಎಂದು ಪರಿಗಣಿಸಲು ಕನಿಷ್ಟ 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರಗಳು. (01 ರಿಂದ 12 ನೇ ತರಗತಿವರೆಗೆ ಅಥವಾ ಅರ್ಹತಾ ಪರೀಕ್ಷೆಯವರೆಗೆ ಅನುಬಂಧ–1ರಂತೆ) ಇದನ್ನು ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಸಲ್ಲಿಸಬೇಕು.
6. ಕನ್ನಡ ಮಾದ್ಯಮದ ಮೀಸಲಾತಿಗೆ ಪರಿಗಣಿಸಲು 1 ರಿಂದ 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಬಗ್ಗೆ ಪ್ರಮಾಣ ಪತ್ರಗಳು (ಅನುಬಂಧ–01 ರಂತೆ)
7. ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಮುದ್ರಿತ ಪ್ರತಿಯನ್ನು ಪಡೆದಿರುವ ಅರ್ಜಿಯ ಪ್ರತಿಯನ್ನು ಹಾಗೂ ಸಿ.ಎ.ಸಿ / ನೋಡಲ್ ಸೆಂಟರ್ ಪ್ರತಿಯ ಬ್ಯಾಂಕ್ ಚಲನ್ ಪ್ರತಿಯನ್ನು ಸಲ್ಲಿಸುವುದು.

**ಸೂಚನೆ:–**ಗ್ರಾಮೀಣ ಮೀಸಲಾತಿ ಇಲ್ಲದಿರುವುದರಿಂದ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಅಗತ್ಯವಿಲ್ಲ.

8. ಪ್ರವರ್ಗದಲ್ಲಿ ಆಯ್ಕೆ ಬಯಸಿದಲ್ಲಿ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು ನಮೂನೆ 'ಡಿ'ಯಲ್ಲಿ, ಪ್ರವರ್ಗ–1 ಅಭ್ಯರ್ಥಿಗಳು ನಮೂನೆ 'ಇ'ಯಲ್ಲಿ ಹಾಗೂ 2ಎ, 2ಬಿ, 3ಎ ಮತ್ತು 3ಬಿ ವರ್ಗಗಳ ಅಭ್ಯರ್ಥಿಗಳು 'ನಮೂನೆ–

ಎಫ್' ನಲ್ಲಿ ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರರಿಂದ ದೃಢೀಕರಿಸಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು

9. ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ
   ಎ) ಮುಕ್ತ ಶಾಲೆಯಲ್ಲಿ ಅಥವಾ ನೇರವಾಗಿ ನೋಂದಣಿ ಮಾಡಿ ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ.ಯನ್ನು ಪಾಸುಮಾಡಿರುವ ಕರ್ನಾಟಕದ ಅಭ್ಯರ್ಥಿಗಳು– 7 ವರ್ಷಗಳದ್ದು
   ಬಿ) ಹೊರನಾಡು ಕನ್ನಡಿಗರು – 5 ವರ್ಷಗಳದ್ದು
   ಸಿ) ಗಡಿನಾಡು ಕನ್ನಡಿಗರು – ವಾಸಸ್ಥಳ ಪ್ರಮಾಣ ಪತ್ರ
10. ವಿಶೇಷ ಗುಂಪುಗಳಲ್ಲಿ ಆಯ್ಕೆ ಬಯಸಿದಲ್ಲಿ ಸಂಬಂಧಿಸಿದ ಪ್ರಮಾಣ ಪತ್ರಗಳು ನಿಗದಿತ ನಮೂನೆಗಳಲ್ಲಿ ಸಲ್ಲಿಸುವುದು.
